# ರಾಷ್ಟ್ರೀಯ ಭದ್ರತಾ ಅಧಿನಿಯಮ, 1980

**27.01.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 21 ರಿಂದ 31ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ವಿಷಯಾನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಕೆಲವು ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಲು ಆದೇಶಗಳನ್ನು ಮಾಡುವ ಅಧಿಕಾರ
4. ಸ್ಥಾನಬದ್ಧತಾ ಆದೇಶಗಳ ಜಾರಿ
5. ಸ್ಥಾನಬದ್ಧತೆಯ ಸ್ಥಳ ಮತ್ತು ಷರತ್ತುಗಳನ್ನು ನಿಯಂತ್ರಿಸುವ ಅಧಿಕಾರ

5ಎ. ಸ್ಥಾನಬದ್ಧತೆಯ ಕಾರಣಗಳು ಬೇರ್ಪಡಿಸಬಹುದಾಗಿರುತ್ತವೆ

6. ಕೆಲವು ಕಾರಣಗಳ ಮೇಲೆ ಸ್ಥಾನಬದ್ಧತಾ ಆದೇಶಗಳು ಅಸಿಂಧು ಅಥವಾ ಅಪ್ರವರ್ತನೀಯವಾಗತಕ್ಕದ್ದಲ್ಲ
7. ತಲೆಮರೆಸಿಕೊಂಡ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು
8. ಆದೇಶದಿಂದ ಬಾಧಿತರಾದ ವ್ಯಕ್ತಿಗಳಿಗೆ ಸ್ಥಾನಬದ್ಧತಾ ಆದೇಶದ ಕಾರಣಗಳನ್ನು ತಿಳಿಯಪಡಿಸುವುದು
9. ಸಲಹಾ ಮಂಡಲಿಗಳ ರಚನೆ
10. ಸಲಹಾ ಮಂಡಲಿಗಳಿಂದ ಅಭಿಪ್ರಾಯ ಕೋರಿಕೆ
11. ಸಲಹಾ ಮಂಡಲಿಗಳ ಕಾರ್ಯವಿಧಾನ
12. ಸಲಹಾ ಮಂಡಲಿಯ ವರದಿಯ ಮೇಲೆ ಕ್ರಮ
13. ಸ್ಥಾನಬದ್ಧತೆಯ ಗರಿಷ್ಠ ಅವಧಿ
14. ಸ್ಥಾನಬದ್ಧತಾ ಆದೇಶಗಳ ರದ್ದಿಯಾತಿ

14ಎ. ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆದುಕೊಳ್ಳದೆ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗಳಿಗಾಗಿ ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಬಹುದಾದ ಸಂದರ್ಭಗಳು

15. ಸ್ಥಾನಬದ್ಧತೆಯಲ್ಲಿ ಇಡಲಾದ ವ್ಯಕ್ತಿಗಳ ತಾತ್ಕಾಲಿಕ ಬಿಡುಗಡೆ
16. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
17. ರಾಜ್ಯ ಕಾನೂನುಗಳ ಅಡಿಯಲ್ಲಿನ ಸ್ಥಾನಬದ್ಧತೆಗಳಿಗೆ ಸಂಬಂಧಿಸಿದಂತೆ ಅಧಿನಿಯಮವು ಪರಿಣಾಮಕಾರಿಯಾಗದಿರುವುದು
18. ನಿರಸನಗಳು ಮತ್ತು ಉಳಿಸುವಿಕೆಗಳು

ಅನುಬಂಧ

# ರಾಷ್ಟ್ರೀಯ ಭದ್ರತಾ ಅಧಿನಿಯಮ, 1980

## (1980ರ ಅಧಿನಿಯಮ ಸಂಖ್ಯೆ 65)

[27ನೇ ಡಿಸೆಂಬರ್, 1980]

ಕೆಲವು ಪ್ರಕರಣಗಳಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಭದ್ರತಾ ಅಧಿನಿಯಮ, 1980 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, –

(ಎ) "ಸಮುಚಿತ ಸರ್ಕಾರ" ಎಂದರೆ, ಕೇಂದ್ರ ಸರ್ಕಾರವು ಮಾಡಿದ ಒಂದು ಸ್ಥಾನಬದ್ಧತಾ ಆದೇಶಕ್ಕೆ ಅಥವಾ ಅಂಥ ಆದೇಶದ ಅಡಿಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿರುವ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಮಾಡಿದ ಅಥವಾ ರಾಜ್ಯಸರ್ಕಾರಕ್ಕೆ ಅಧೀನನಾದ ಒಬ್ಬ ಅಧಿಕಾರಿಯು ಮಾಡಿದ ಒಂದು ಸ್ಥಾನಬದ್ಧತಾ ಆದೇಶಕ್ಕೆ ಅಥವಾ ಅಂಥ ಆದೇಶದ ಅಡಿಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿರುವ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ;

(ಬಿ) "ಸ್ಥಾನಬದ್ಧತಾ ಆದೇಶ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ಮಾಡಿದ ಒಂದು ಆದೇಶ;

(ಸಿ) "ವಿದೇಶೀಯ" ಎಂಬುದು ವಿದೇಶೀಯರ ಅಧಿನಿಯಮ, 1946 ರಲ್ಲಿ (1946ರ 31) ಇರುವಂಥದ್ದೇ ಅರ್ಥವನ್ನು ಹೊಂದಿರುತ್ತದೆ;

(ಡಿ) "ವ್ಯಕ್ತಿ" ಎಂಬುದು ಒಬ್ಬ ವಿದೇಶೀಯನನ್ನೂ ಒಳಗೊಳ್ಳುತ್ತದೆ;

(ಇ) ಒಂದು ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ ಅದರ ಆಡಳಿತಗಾರ.

**3. ಕೆಲವು ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಲು ಆದೇಶಗಳನ್ನು ಮಾಡುವ ಅಧಿಕಾರ.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು,–

(ಎ) ಯಾರೇ ವ್ಯಕ್ತಿಯು ಭಾರತದ ರಕ್ಷಣೆಗೆ, ವಿದೇಶಿ ಸರ್ಕಾರಗಳೊಂದಿಗಿನ ಭಾರತದ ಸಂಬಂಧಗಳಿಗೆ ಅಥವಾ ಭಾರತದ ಭದ್ರತೆಗೆ ಯಾವುದೇ ರೀತಿಯಲ್ಲಿ ಬಾಧಕವಾಗುವಂತೆ ಕಾರ್ಯನಿರ್ವಹಿಸುವುದನ್ನು ತಡೆಗಟ್ಟುವ ದೃಷ್ಟಿಯಿಂದ ಅವನಿಗೆ ಸಂಬಂಧಿಸಿದಂತೆ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡುವುದು ಅವಶ್ಯವೆಂದು ಅದಕ್ಕೆ ಮನದಟ್ಟಾದರೆ;ಅಥವಾ

(ಬಿ) ಯಾರೇ ವಿದೇಶೀಯನಿಗೆ ಸಂಬಂಧಿಸಿದಂತೆ ಭಾರತದಲ್ಲಿ ಅವನ ಮುಂದುವರಿದ ಇರುವಿಕೆಯನ್ನು ನಿಯಂತ್ರಿಸುವ ದೃಷ್ಟಿಯಿಂದ ಅಥವಾ ಅವನನ್ನು ಭಾರತದಿಂದ ಹೊರಹಾಕಲು ವ್ಯವಸ್ಥೆಗಳನ್ನು ಮಾಡುವ ದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡುವುದು ಅವಶ್ಯವೆಂದು ಮನದಟ್ಟಾದರೆ

– ಹಾಗೆ ಮಾಡತಕ್ಕದ್ದೆಂದು ನಿರ್ದೇಶಿಸಿ ಒಂದು ಆದೇಶವನ್ನು ಮಾಡಬಹುದು.

(2) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಅವನು ರಾಜ್ಯದ ಭದ್ರತೆಗೆ ಯಾವುದೇ ರೀತಿಯಲ್ಲಿ ಬಾಧಕವಾಗುವಂತೆ ಕಾರ್ಯನಿರ್ವಹಿಸುವುದನ್ನು ಅಥವಾ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಯಾವುದೇ ರೀತಿಯಲ್ಲಿ ಬಾಧಕವನ್ನುಂಟು ಮಾಡುವಂತೆ ಕಾರ್ಯನಿರ್ವಹಿಸುವುದನ್ನು ಅಥವಾ ಸಮುದಾಯಕ್ಕೆ ಅತ್ಯವಶ್ಯವಾದ ಸರಬರಾಜುಗಳು ಮತ್ತು ಸೇವೆಗಳನ್ನು

ನಿರ್ವಹಿಸಿಕೊಂಡು ಬರುವುದಕ್ಕೆ ಯಾವುದೇ ರೀತಿಯಲ್ಲಿ ಬಾಧಕವನ್ನುಂಟುಮಾಡುವಂತೆ ಕಾರ್ಯನಿರ್ವಹಿಸುವುದನ್ನು ತಡೆಗಟ್ಟುವ ದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡುವುದು ಅವಶ್ಯವೆಂದು ಮನದಟ್ಟಾದರೆ, ಅದು ಹಾಗೆ ಮಾಡತಕ್ಕದ್ದೆಂದು ನಿರ್ದೇಶಿಸುವ ಒಂದು ಆದೇಶವನ್ನು ಮಾಡಬಹುದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಜನ ಸಮುದಾಯಕ್ಕೆ ಅತ್ಯಾವಶ್ಯವಾದ ಸರಬರಾಜುಗಳು ಮತ್ತು ಸೇವೆಗಳ ನಿರ್ವಹಣೆಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ಕೆಲಸಮಾಡುವುದು" ಎಂಬುದು ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧಿನಿಯಮ, 1980ರ (1980ರ 7) 3ನೇ ಪ್ರಕರಣದ (1)ನೇ ಉಪಪ್ರಕರಣದ ವಿವರಣೆಯಲ್ಲಿ ಪರಿಭಾಷಿಸಿದ "ಜನಸಮುದಾಯಕ್ಕೆ ಅತ್ಯಾವಶ್ಯಕವಾದ ವಸ್ತುಗಳ ಸರಬರಾಜಿನ ನಿರ್ವಹಣೆಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ಕೆಲಸ ಮಾಡುವುದು" ಎಂಬುದನ್ನು ಒಳಗೊಳ್ಳುವುದಿಲ್ಲ, ಮತ್ತು ತದನುಸಾರ, ಮೇಲೆ ಹೇಳಿದ ಅಧಿನಿಯಮದ ಅಡಿಯಲ್ಲಿ ಯಾವ ಕಾರಣಕ್ಕಾಗಿ ಸ್ಥಾನಬದ್ಧತೆಯ ಆದೇಶವನ್ನು ಮಾಡಬಹುದೋ ಆ ಯಾವುದೇ ಕಾರಣಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಸ್ಥಾನಬದ್ಧತೆಯ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ ;

(3) ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟನ ಅಥವಾ ಒಬ್ಬ ಪೊಲೀಸ್ ಕಮೀಷನರ್‌ನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ ಯಾವುದೇ ಪ್ರದೇಶದಲ್ಲಿ ಉಂಟಾಗಿರುವ ಅಥವಾ ಉಂಟಾಗುವ ಸಂಭವವಿರುವ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರವು (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ಬಗ್ಗೆ ಮನದಟ್ಟಾದಾಗ ಲಿಖಿತ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯಲ್ಲಿ ಅಂಥ ಜಿಲ್ಲಾ ಮ್ಯಾಜಿಸ್ಟ್ರೇಟ್‌ನು ಅಥವಾ ಪೊಲೀಸ್ ಕಮೀಷನರನು ಸಹ ಸದರಿ ಉಪಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಬಹುದೆಂದು ನಿರ್ದೇಶಿಸುವುದು ಅವಶ್ಯವೆಂದು ತನಗೆ ಮನದಟ್ಟಾದರೆ, ಅದು ಹಾಗೆ ಮಾಡಬಹುದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಮಾಡಿದ ಒಂದು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮೊದಲನೇ ಸಲ ಮೂರು ತಿಂಗಳನ್ನು ಮೀರತಕ್ಕದ್ದಲ್ಲ. ಆದರೆ ರಾಜ್ಯ ಸರ್ಕಾರಕ್ಕೆ, ಅಂಥ ಅವಧಿಯನ್ನು ಯಾವುದೇ ಒಂದು ಕಾಲದಲ್ಲಿ ಮೂರು ತಿಂಗಳನ್ನು ಮೀರದ ಯಾವುದೇ ಅವಧಿಗೆ ಕಾಲಕಾಲಕ್ಕೆ ವಿಸ್ತರಿಸಲು ಅಂಥ ಆದೇಶವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಮನದಟ್ಟಾದರೆ, ಹಾಗೆ ಮಾಡಬಹುದು.

(4) (3)ನೇ ಉಪಪ್ರಕರಣದಲ್ಲಿ ನಮೂದಿಸಲಾದ ಒಬ್ಬ ಅಧಿಕಾರಿಯು ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡಿದಾಗ ಆ ಆದೇಶವನ್ನು ಯಾವ ಕಾರಣಗಳ ಮೇಲೆ ಮಾಡಲಾಯಿತೋ ಆ ಕಾರಣಗಳೊಂದಿಗೆ ಮತ್ತು ಆ ವಿಷಯಕ್ಕೆ ಸಂಬಂಧಿಸಿದೆ ಎಂದು ಅವನು ಅಭಿಪ್ರಾಯಪಡುವಂಥ ಇತರ ವಿವರಗಳೊಂದಿಗೆ ಅವನು ಯಾವ ರಾಜ್ಯ ಸರ್ಕಾರಕ್ಕೆ ಅಧೀನನಾಗಿರುವನೋ ಅದಕ್ಕೆ ಆ ಸಂಗತಿಯನ್ನು ತಕ್ಷಣ ವರದಿ ಮಾಡತಕ್ಕದ್ದು ಮತ್ತು ಅಂಥ ಯಾವುದೇ ಆದೇಶವು, ಈ ನಡುವೆ ರಾಜ್ಯ ಸರ್ಕಾರವು ಅದನ್ನು ಅನುಮೋದಿಸಿದ್ದ ಹೊರತು, ಅದನ್ನು ಮಾಡಿದ ತರುವಾಯ ಹನ್ನೆರಡು ದಿನಗಳಿಗಿಂತ ಹೆಚ್ಚಿಗೆಯಾಗಿ ಜಾರಿಯಲ್ಲಿರತಕ್ಕದ್ದಲ್ಲ:

ಪರಂತು, 8ನೇ ಪ್ರಕರಣದ ಅಡಿಯಲ್ಲಿ ಸ್ಥಾನಬದ್ಧತೆಯ ಕಾರಣಗಳನ್ನು ಸ್ಥಾನಬದ್ಧತೆಯ ದಿನಾಂಕದಿಂದ ಐದು ದಿನಗಳ ತರುವಾಯ, ಆದರೆ ಹತ್ತು ದಿನಗಳಿಗಿಂತ ತಡವಾಗಿಯಲ್ಲದೆ ಆ ಆದೇಶವನ್ನು ಮಾಡಿದ ಅಧಿಕಾರಿಯು ತಿಳಿಸಿದಲ್ಲಿ ಈ ಉಪಪ್ರಕರಣವು "ಹನ್ನೆರಡು ದಿನಗಳಿಗಿಂತ" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳಿಗಿಂತ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದೆಂಬ ಮಾರ್ಪಾಡಿಗೆ ಒಳಪಟ್ಟು ಅನ್ವಯವಾಗತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಆದೇಶವನ್ನು ಮಾಡಿದಾಗ ಅಥವಾ ಅನುಮೋದಿಸಿದಾಗ, ಆ ರಾಜ್ಯ ಸರ್ಕಾರವು ಏಳು ದಿನಗಳೊಳಗೆ ಆ ಸಂಗತಿಯನ್ನು ಕೇಂದ್ರ ಸರ್ಕಾರಕ್ಕೆ ಯಾವ ಕಾರಣಗಳ ಮೇಲೆ ಆದೇಶವನ್ನು ಮಾಡಲಾಯಿತೋ ಆ ಕಾರಣಗಳೊಂದಿಗೆ ಮತ್ತು ಆ ಆದೇಶದ ಅವಶ್ಯಕತೆಗೆ ಸಂಬಂಧಿಸಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಂಥ ಇತರ ವಿವರಗಳೊಂದಿಗೆ ವರದಿ ಮಾಡತಕ್ಕದ್ದು.

**4. ಸ್ಥಾನಬದ್ಧತಾ ಆದೇಶಗಳ ಜಾರಿ.–** ಒಂದು ಸ್ಥಾನಬದ್ಧತಾ ಆದೇಶವನ್ನು ಭಾರತದ ಯಾವುದೇ ಸ್ಥಳದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಅಡಿಯಲ್ಲಿ ದಸ್ತಗಿರಿ ವಾರಂಟುಗಳನ್ನು ಜಾರಿಗೊಳಿಸುವುದಕ್ಕಾಗಿ ಉಪಬಂಧಿಸಿದ ವಿಧಾನದಲ್ಲಿ ಜಾರಿ ಮಾಡಬಹುದು.

**5. ಸ್ಥಾನಬದ್ಧತೆಯ ಸ್ಥಳ ಮತ್ತು ಷರತ್ತುಗಳನ್ನು ನಿಯಂತ್ರಿಸುವ ಅಧಿಕಾರ.–** ಯಾರಿಗೆ ಸಂಬಂಧಿಸಿದಂತೆ ಒಂದು ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು,–

(ಎ) ನಿರ್ವಹಣೆ, ಶಿಸ್ತು ಮತ್ತು ಶಿಸ್ತಿನ ಭಾಗಕ್ಕೆ ಸಂಬಂಧಿಸಿದಂತೆ ಶಿಕ್ಷೆಯ ಬಗ್ಗೆ ಷರತ್ತುಗಳನ್ನು ಒಳಗೊಂಡಂತೆ, ಸಮುಚಿತ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ಷರತ್ತುಗಳ ಮೇರೆಗೆ ಸ್ಥಾನಬದ್ಧತೆಗೆ ಗುರಿಯಾಗತಕ್ಕದ್ದು ;

(ಬಿ) ಸಮುಚಿತ ಸರ್ಕಾರದ ಆದೇಶದ ಮೂಲಕ ಅದೇ ರಾಜ್ಯದೊಳಗೆ ಆಗಲಿ ಅಥವಾ ಮತ್ತೊಂದು ರಾಜ್ಯದೊಳಗೆ ಆಗಲಿ ಸ್ಥಾನಬದ್ಧತೆಯ ಒಂದು ಸ್ಥಳದಿಂದ ಸ್ಥಾನಬದ್ಧತೆಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳಲು ಗುರಿಯಾಗತಕ್ಕದ್ದು:

ಪರಂತು, ರಾಜ್ಯ ಸರ್ಕಾರದ ಸಮ್ಮತಿಯ ಹೊರತಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಒಬ್ಬ ವ್ಯಕ್ತಿಯನ್ನು ಸ್ಥಳಾಂತರಿಸುವುದಕ್ಕಾಗಿ (ಬಿ) ಖಂಡದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**5ಎ. ಸ್ಥಾನಬದ್ಧತೆಯ ಕಾರಣಗಳು ಬೇರ್ಪಡಿಸಬಹುದಾಗಿರುತ್ತವೆ.–** ಎರಡು ಅಥವಾ ಹೆಚ್ಚಿನ ಕಾರಣಗಳ ಮೇಲೆ 3ನೇ ಪ್ರಕರಣದ ಅಡಿಯಲ್ಲಿನ ಸ್ಥಾನಬದ್ಧತಾ ಆದೇಶದ (ಅದನ್ನು ರಾಷ್ಟ್ರೀಯ ಭದ್ರತಾ (ಎರಡನೇ ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ಮಾಡಿರಲಿ) ಅನುಸರಣೆಯಲ್ಲಿ ಒಬ್ಬ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟಿರುವಲ್ಲಿ ಅಂಥ ಸ್ಥಾನಬದ್ಧತಾ ಆದೇಶವನ್ನು ಅಂಥ ಪ್ರತಿಯೊಂದು ಕಾರಣದ ಮೇಲೆ ಪ್ರತ್ಯೇಕವಾಗಿ ಮಾಡಲಾಗಿದೆಯೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,–

(ಎ) ಅಂಥ ಆದೇಶವು ಒಂದು ಅಥವಾ ಕೆಲವು ಕಾರಣಗಳಿಗಾಗಿ,–

(i) ಅಸ್ಪಷ್ಟವಾಗಿದೆ

(ii) ಅಸ್ತಿತ್ವದಲ್ಲಿಲ್ಲ

(iii) ಸುಸಂಬದ್ಧವಾದುದಲ್ಲ

(iv) ಅಂಥ ವ್ಯಕ್ತಿಗೆ ಸಂಬಂಧಿಸಿಲ್ಲ ಅಥವಾ ಅವನಿಗೆ ನಿಕಟವಾಗಿ ಸಂಬಂಧಿಸಿಲ್ಲ

(v) ಇತರ ಯಾವುದೇ ಕಾರಣವಿರಲಿ ಅದಕ್ಕಾಗಿ ಅಸಿಂಧುವಾಗಿದೆ

– ಎಂಬ ಕಾರಣ ಮಾತ್ರದಿಂದಲೇ ಅದು ಅಸಿಂಧು ಅಥವಾ ಅಪ್ರವರ್ತನೀಯವಾಗಿದೆ ಎಂದು ಭಾವಿಸತಕ್ಕದ್ದಲ್ಲ ಮತ್ತು ಅದರಿಂದಾಗಿ ಅಂಥ ಆದೇಶವನ್ನು ಮಾಡಿದ ಸರ್ಕಾರ ಅಥವಾ ಅಧಿಕಾರಿಯು ಉಳಿದ ಕಾರಣ ಅಥವಾ ಕಾರಣಗಳಿಗೆ ಸಂಬಂಧಿಸಿದಂತೆ 3ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಮನದಟ್ಟು ಮಾಡಿಕೊಂಡಿದೆಯೆಂದು ಅಥವಾ ಮಾಡಿಕೊಂಡಿರುವನೆಂದು ಮತ್ತು ಸ್ಥಾನಬದ್ಧತಾ ಆದೇಶವನ್ನು ಮಾಡಿದೆಯೆಂದು ಅಥವಾ ಮಾಡಿರುವನೆಂದು ತೀರ್ಮಾನಿಸಲು ಸಾಧ್ಯವಿಲ್ಲ.

(ಬಿ) ಸ್ಥಾನಬದ್ಧತಾ ಆದೇಶವನ್ನು ಮಾಡಿದ ಸರ್ಕಾರ ಅಥವಾ ಅಧಿಕಾರಿಗೆ ಉಳಿದ ಕಾರಣ ಅಥವಾ ಕಾರಣಗಳಿಗೆ ಸಂಬಂಧಿಸಿದಂತೆ ಆ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಮನದಟ್ಟು ಮಾಡಿಕೊಂಡ ತರುವಾಯ ಸದರಿ ಪ್ರಕರಣದ ಅಡಿಯಲ್ಲಿ ಸ್ಥಾನಬದ್ಧತಾ ಆದೇಶವನ್ನು ಮಾಡಿರುತ್ತದೆ ಎಂಬುದಾಗಿ ಭಾವಿಸತಕ್ಕದ್ದು.

**6. ಕೆಲವು ಕಾರಣಗಳ ಮೇಲೆ ಸ್ಥಾನಬದ್ಧತಾ ಆದೇಶಗಳು ಅಸಿಂಧು ಅಥವಾ ಅಪ್ರವರ್ತನೀಯ ವಾಗತಕ್ಕದ್ದಲ್ಲ.–** ಯಾವುದೇ ಸ್ಥಾನಬದ್ಧತಾ ಆದೇಶವು,–

(ಎ) ಅದರ ಅಡಿಯಲ್ಲಿ ಸ್ಥಾನಬದ್ಧತೆಯಲ್ಲಿಡಬೇಕಾದ ವ್ಯಕ್ತಿಯು, ಆದೇಶವನ್ನು ಮಾಡಿದ ಸರ್ಕಾರ ಅಥವಾ ಅಧಿಕಾರಿಯ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಪರಿಮಿತಿಗಳ ಹೊರಗೆ ಇದ್ದಾನೆ;

(ಬಿ) ಅಂಥ ವ್ಯಕ್ತಿಯ ಸ್ಥಾನಬದ್ಧತೆಯ ಸ್ಥಳವು ಸದರಿ ಪರಿಮಿತಿಗಳ ಹೊರಗೆ ಇದೆ ಎಂಬ ಕಾರಣ ಮಾತ್ರದಿಂದಲೇ ಅಸಿಂಧು ಅಥವಾ ಅಪ್ರವರ್ತನೀಯವಾಗತಕ್ಕದ್ದಲ್ಲ.

**7. ತಲೆಮರೆಸಿಕೊಂಡ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ, 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಹೇಳಿದ ಒಬ್ಬ ಅಧಿಕಾರಿಗೆ, ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಆ ಆದೇಶವನ್ನು ಜಾರಿಮಾಡಲಾಗದಂತೆ ತಲೆಮರೆಸಿಕೊಂಡಿದ್ದಾನೆಂದು ಅಥವಾ ಬಚ್ಚಿಟ್ಟುಕೊಂಡಿದ್ದಾನೆಂದು ನಂಬಲು ಕಾರಣಗಳಿದ್ದಾಗ ಆ ಸರ್ಕಾರ ಅಥವಾ ಅಧಿಕಾರಿಯು,–

(ಎ) ಸದರಿ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಸ್ಥಳದ ಮೇಲೆ ಅಧಿಕಾರ ಹೊಂದಿರುವ ಮಹಾನಗರ ಮ್ಯಾಜಿಸ್ಟ್ರೇಟನಿಗೆ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಆ ಸಂಗತಿಯನ್ನು ಲಿಖಿತದಲ್ಲಿ ವರದಿ ಮಾಡಬಹುದು.

(ಬಿ) ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ, ಸದರಿ ವ್ಯಕ್ತಿಯನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯ ಮುಂದೆ, ಅಂಥ ಸ್ಥಳದಲ್ಲಿ ಮತ್ತು ಅಂಥ ಅವಧಿ ಯೊಳಗೆ ಹಾಜರಾಗುವಂತೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ಯಾರೇ ವ್ಯಕ್ತಿಯ ವಿರುದ್ಧ ಒಂದು ವರದಿಯನ್ನು ಮಾಡಿದ ತರುವಾಯ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 82, 83, 84 ಮತ್ತು 85ನೇ ಪ್ರಕರಣಗಳ ಉಪಬಂಧಗಳು ಅವನ ವಿರುದ್ಧ ಮಾಡಿರುವ ಸ್ಥಾನಬದ್ಧತೆಯು ಮ್ಯಾಜಿಸ್ಟ್ರೇಟನು ಹೊರಡಿಸಿದ ಒಂದು ವಾರಂಟು ಆಗಿದ್ದಿದ್ದರೆ ಹೇಗೋ ಹಾಗೆ ಅಂಥ ವ್ಯಕ್ತಿಗೆ ಮತ್ತು ಅವನ ಸ್ವತ್ತಿಗೆ ಸಂಬಂಧಿಸಿದಂತೆ ಅನ್ವಯಿಸತಕ್ಕದ್ದು.

(3) ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ಹೊರಡಿಸಿದ ಒಂದು ಆದೇಶವನ್ನು ಪಾಲಿಸಲು ತಪ್ಪಿದರೆ, ಅದನ್ನು ಪಾಲಿಸಲು ತನಗೆ ಸಾಧ್ಯವಾಗಲಿಲ್ಲವೆಂದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಆದೇಶದಲ್ಲಿ ನಮೂದಿಸಿದ ಅಧಿಕಾರಿಗೆ ಅದನ್ನು ಪಾಲಿಸಲು ಸಾಧ್ಯವಾಗದ ಕಾರಣವನ್ನು ಮತ್ತು ತಾನಿರುವ ಸ್ಥಳವನ್ನು ತಿಳಿಸಿದ್ದನೆಂದು ಅವನು ರುಜುವಾತು ಮಾಡಿದ ಹೊರತು, ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(4) ದಂಡಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ 2) ಏನೇ ಅಡಕವಾಗಿದ್ದರೂ ಸಹ, (3)ನೇ ಉಪಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪರಾಧವೂ ಸಂಜ್ಞೇಯವಾಗಿರತಕ್ಕದ್ದು.

**8. ಆದೇಶದಿಂದ ಬಾಧಿತರಾದ ವ್ಯಕ್ತಿಗಳಿಗೆ ಸ್ಥಾನಬದ್ಧತಾ ಆದೇಶದ ಕಾರಣಗಳನ್ನು ತಿಳಿಯಪಡಿಸುವುದು.–** (1) ಒಂದು ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಒಬ್ಬ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟಿರುವಾಗ, ಆದೇಶವನ್ನು ಮಾಡಿದ ಪ್ರಾಧಿಕಾರವು ಆದಷ್ಟು ಬೇಗ, ಆದರೆ, ಸಾಮಾನ್ಯವಾಗಿ ಸ್ಥಾನಬದ್ಧತೆಯ ದಿನಾಂಕದಿಂದ ಐದು ದಿನಗಳನ್ನು ಮೀರದಂತೆ ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಹತ್ತು ದಿನಗಳನ್ನು ಮೀರದಂತೆ ಯಾವ ಕಾರಣಗಳಿಗಾಗಿ ಆ ಆದೇಶವನ್ನು ಮಾಡಲಾಗಿದೆಯೋ ಅವುಗಳನ್ನು ಅವನಿಗೆ ತಿಳಿಸತಕ್ಕದ್ದು ಮತ್ತು ಅವನಿಗೆ, ಆ ಆದೇಶದ ವಿರುದ್ಧ ಸಮುಚಿತ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಿಕೊಳ್ಳಲು ಅತಿ ಶೀಘ್ರ ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ, ಯಾವ ಸಂಗತಿಗಳನ್ನು ತಿಳಿಯಪಡಿಸುವುದು ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವೆಂದು ಪ್ರಾಧಿಕಾರವು ಪರ್ಯಾಲೋಚಿಸುವುದೋ ಅವುಗಳನ್ನು ತಿಳಿಯಪಡಿಸುವಂತೆ ಅದನ್ನು ಅಗತ್ಯಪಡಿಸತಕ್ಕದ್ದಲ್ಲ.

**9. ಸಲಹಾ ಮಂಡಲಿಗಳ ರಚನೆ.–** (1) ಕೇಂದ್ರ ಸರ್ಕಾರ ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು ಅವಶ್ಯವಾದಾಗಲೆಲ್ಲಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಅಥವಾ ಹೆಚ್ಚು ಸಲಹಾ ಮಂಡಲಿಗಳನ್ನು ರಚಿಸತಕ್ಕದ್ದು.

(2) ಅಂಥ ಪ್ರತಿಯೊಂದು ಮಂಡಲಿಯು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಅಥವಾ ಹಾಗೆ ನೇಮಕಗೊಳ್ಳಲು ಅರ್ಹರಾಗಿರುವ ಮೂವರು ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ವ್ಯಕ್ತಿಗಳನ್ನು ಸಮುಚಿತ ಸರ್ಕಾರವು ನೇಮಕ ಮಾಡತಕ್ಕದ್ದು.

(3) ಸಮುಚಿತ ಸರ್ಕಾರವು ಒಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಸಲಹಾ ಮಂಡಲಿಯ ಒಬ್ಬ ಸದಸ್ಯನನ್ನು ಅದರ ಅಧ್ಯಕ್ಷನಾಗಿ ನೇಮಕ ಮಾಡತಕ್ಕದ್ದು ಮತ್ತು ಒಂದು ಒಕ್ಕೂಟ ರಾಜ್ಯಕ್ಷೇತ್ರದ ಸಂದರ್ಭದಲ್ಲಿ ಒಂದು ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಯಾರೇ ವ್ಯಕ್ತಿಯನ್ನು ಸಲಹಾ ಮಂಡಲಿಗೆ ನೇಮಕ ಮಾಡುವಾಗ ಸಂಬಂಧಿಸಿದ ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

**10. ಸಲಹಾ ಮಂಡಲಿಗಳಿಂದ ಅಭಿಪ್ರಾಯ ಕೋರಿಕೆ.–** ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ಸ್ಥಾನಬದ್ಧತಾ ಆದೇಶವನ್ನು ಮಾಡಿರುವ ಪ್ರತಿಯೊಂದು ಸಂದರ್ಭದಲ್ಲಿ ಸಮುಚಿತ ಸರ್ಕಾರವು ಆದೇಶದ ಅಡಿಯಲ್ಲಿ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟ ದಿನಾಂಕದಿಂದ ಮೂರು ವಾರಗಳೊಳಗೆ ಯಾವ ಕಾರಣಗಳಿಗಾಗಿ ಆದೇಶವನ್ನು ಮಾಡಲಾಗಿದೆಯೋ ಮತ್ತು ಅವುಗಳನ್ನು ಆದೇಶದ ಮೂಲಕ ಬಾಧಿತನಾದ ವ್ಯಕ್ತಿಯು ಮಾಡಿಕೊಂಡ ಮನವಿ ಯಾವುದಾದರೂ ಇದ್ದರೆ ಅದನ್ನು ಮತ್ತು 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ನಮೂದಿಸಿದ ಅಧಿಕಾರಿಯು ಆ ಆದೇಶವನ್ನು ಮಾಡಿರುವ ಸಂದರ್ಭದಲ್ಲಿ ಆ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಅಧಿಕಾರಿಯು ಮಾಡಿದ ವರದಿಯನ್ನೂ ಸಹ 9ನೇ ಪ್ರಕರಣದ ಅಡಿಯಲ್ಲಿ ಅದು ರಚಿಸಿದ ಸಲಹಾ ಮಂಡಲಿಯ ಮುಂದೆ ಇಡತಕ್ಕದ್ದು.

**11. ಸಲಹಾ ಮಂಡಲಿಗಳ ಕಾರ್ಯವಿಧಾನ.–** (1) ಸಲಹಾ ಮಂಡಲಿಯು ತನ್ನ ಮುಂದೆ ಇಟ್ಟ ವಿಷಯಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದಂಥ ಇನ್ನೂ ಹೆಚ್ಚಿನ ಮಾಹಿತಿಯನ್ನು ಸಮುಚಿತ ಸರ್ಕಾರ ಅಥವಾ ಸಮುಚಿತ ಸರ್ಕಾರದ ಮೂಲಕ ಈ ಉದ್ದೇಶಕ್ಕಾಗಿ ಕರೆಸಲಾದ ಯಾರೇ ವ್ಯಕ್ತಿಯಿಂದ ಅಥವಾ ಸಂಬಂಧಪಟ್ಟ ವ್ಯಕ್ತಿಯಿಂದ ತರಿಸಿಕೊಂಡ ತರುವಾಯ ಮತ್ತು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಯ ಅಹವಾಲನ್ನು ಕೇಳುವುದು ಅವಶ್ಯವೆಂದು ಅದು ಪರ್ಯಾಲೋಚಿಸಿದರೆ ಅಥವಾ ಸಂಬಂಧಪಟ್ಟ ವ್ಯಕ್ತಿಯು ತನ್ನ ಅಹವಾಲನ್ನು ಹೇಳಿಕೊಳ್ಳಲು ಇಚ್ಛಿಸಿದರೆ, ಅವನ ಅಹವಾಲನ್ನು ಖುದ್ದಾಗಿ ಕೇಳಿದ ತರುವಾಯ, ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಯ ದಿನಾಂಕದಿಂದ ಏಳು ವಾರಗಳೊಳಗಾಗಿ ಸಮುಚಿತ ಸರ್ಕಾರಕ್ಕೆ ತನ್ನ ವರದಿಯನ್ನು ಒಪ್ಪಿಸತಕ್ಕದ್ದು.

(2) ಸಲಹಾ ಮಂಡಲಿಯ ವರದಿಯು, ಅದರ ಪ್ರತ್ಯೇಕ ಭಾಗದಲ್ಲಿ ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಗಾಗಿ ಸಾಕಷ್ಟು ಕಾರಣಗಳು ಇವೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸಲಹಾ ಮಂಡಲಿಯ ಅಭಿಪ್ರಾಯವನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ಸಲಹಾ ಮಂಡಲಿಯಲ್ಲಿರುವ ಸದಸ್ಯರಲ್ಲಿ ಭಿನ್ನಾಭಿಪ್ರಾಯವು ಉಂಟಾದಾಗ ಅಂಥ ಸದಸ್ಯರ ಬಹುಮತದ ಅಭಿಪ್ರಾಯವನ್ನು ಮಂಡಲಿಯ ಅಭಿಪ್ರಾಯವೆಂಬುದಾಗಿ ಭಾವಿಸತಕ್ಕದ್ದು.

(4) ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾರ ವಿರುದ್ಧ ಒಂದು ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು, ಸಲಹಾ ಮಂಡಲಿಯ ಅಭಿಪ್ರಾಯ ಕೋರಿಕೆಗೆ ಸಂಬಂಧಿಸಿದಂತೆ ಯಾವುದೇ ವಿಷಯದಲ್ಲಿ ಯಾರೇ ನ್ಯಾಯವಾದಿಯ ಮೂಲಕ ಹಾಜರಾಗಲು ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಸಲಹಾ ಮಂಡಲಿಯ ಅಭಿಪ್ರಾಯವನ್ನು ನಿರ್ದಿಷ್ಟಪಡಿಸಿರುವಂಥ ವರದಿಯ ಭಾಗವನ್ನು ಹೊರತುಪಡಿಸಿ, ಸಲಹಾ ಮಂಡಲಿಯ ವ್ಯವಹರಣೆಗಳು ಮತ್ತು ಅದರ ವರದಿಯು ಗೋಪ್ಯವಾಗಿರತಕ್ಕದ್ದು.

**12. ಸಲಹಾ ಮಂಡಲಿಯ ವರದಿಯ ಮೇಲೆ ಕ್ರಮ.–** (1) ಸಲಹಾ ಮಂಡಲಿಯು ತನ್ನ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಯ ಸ್ಥಾನಬದ್ಧತೆಗಾಗಿ ಸಾಕಷ್ಟು ಕಾರಣವಿದೆ ಎಂದು ವರದಿಮಾಡಿದ ಯಾವುದೇ ಸಂದರ್ಭದಲ್ಲಿ, ಸಮುಚಿತ ಸರ್ಕಾರವು ಸ್ಥಾನಬದ್ಧತಾ ಆದೇಶವನ್ನು ಸ್ಥಿರಪಡಿಸಬಹುದು ಮತ್ತು ತಾನು ಸೂಕ್ತವೆಂದು ಯೋಚಿಸುವಂಥ ಒಂದು ಅವಧಿಗಾಗಿ ಸಂಬಂಧಿಸಿದ ವ್ಯಕ್ತಿಯ ಸ್ಥಾನಬದ್ಧತೆಯನ್ನು ಮುಂದುವರೆಸಬಹುದು.

(2) ಸಲಹಾ ಮಂಡಲಿಯು, ತನ್ನ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಯ ಸ್ಥಾನಬದ್ಧತೆಗೆ ಸಾಕಷ್ಟು ಕಾರಣವಿಲ್ಲವೆಂದು ವರದಿ ಮಾಡಿರುವ ಯಾವುದೇ ಸಂದರ್ಭದಲ್ಲಿ ಸಮುಚಿತ ಸರ್ಕಾರವು ಆ ಸ್ಥಾನಬದ್ಧತೆಯ ಆದೇಶವನ್ನು ರದ್ದುಗೊಳಿಸತಕ್ಕದ್ದು ಮತ್ತು ಸಂಬಂಧಪಟ್ಟ ವ್ಯಕ್ತಿಯನ್ನು ತಕ್ಷಣ ಬಿಡುಗಡೆ ಮಾಡಿಸತಕ್ಕದ್ದು.

**13. ಸ್ಥಾನಬದ್ಧತೆಯ ಗರಿಷ್ಠ ಅವಧಿ.–** 12ನೇ ಪ್ರಕರಣದ ಅಡಿಯಲ್ಲಿ ಸ್ಥಿರೀಕರಿಸಲಾಗಿರುವಂಥ ಯಾವುದೇ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದಾದಂಥ ಗರಿಷ್ಠ ಅವಧಿಯು ಸ್ಥಾನಬದ್ಧತೆಯ ದಿನಾಂಕದಿಂದ ಹನ್ನೆರಡು ತಿಂಗಳು ಆಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಅದಕ್ಕಿಂತ ಮುಂಚಿನ ಯಾವುದೇ ಕಾಲದಲ್ಲಿ ಸ್ಥಾನಬದ್ಧತಾ ಆದೇಶವನ್ನು ರದ್ದುಗೊಳಿಸುವ ಅಥವಾ ಮಾರ್ಪಾಟುಮಾಡುವ ಸಮುಚಿತ ಸರ್ಕಾರದ ಅಧಿಕಾರಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**14. ಸ್ಥಾನಬದ್ಧತಾ ಆದೇಶಗಳ ರದ್ದಿಯಾತಿ.–** (1) ಸಾಮಾನ್ಯ ಖಂಡಗಳ ಅಧಿನಿಯಮ, 1897ರ (1897ರ 10) 21ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾವುದೇ ಕಾಲದಲ್ಲಿ ಒಂದು ಸ್ಥಾನಬದ್ಧತಾ ಆದೇಶವನ್ನು,–

(ಎ) 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ನಮೂದಿಸಿದ ಅಧಿಕಾರಿಯು ಆ ಆದೇಶವನ್ನು ಮಾಡಿದ್ದರೂ ಸಹ, ಆ ಅಧಿಕಾರಿಯು ಯಾವುದಕ್ಕೆ ಅಧೀನನಾಗಿರುವನೋ ಆ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ರದ್ದುಮಾಡಬಹುದು ಅಥವಾ ಮಾರ್ಪಾಟುಮಾಡಬಹುದು.

(ಬಿ) ಆ ಆದೇಶವನ್ನು ರಾಜ್ಯ ಸರ್ಕಾರವು ಮಾಡಿದರೂ ಸಹ, ಕೇಂದ್ರ ಸರ್ಕಾರವು ರದ್ದು ಮಾಡಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಒಂದು ಸ್ಥಾನಬದ್ಧತಾ ಆದೇಶದ (ಇಲ್ಲಿ ಇನ್ನುಮುಂದೆ ಈ ಉಪಪ್ರಕರಣದಲ್ಲಿ ಮೊದಲಿನ ಸ್ಥಾನಬದ್ಧತಾ ಆದೇಶವೆಂದು ಉಲ್ಲೇಖಿಸಿದೆ) ಮುಕ್ತಾಯ ಅಥವಾ ರದ್ದಿಯಾತಿಯು ಅಂಥ ಮೊದಲಿನ ಸ್ಥಾನಬದ್ಧತಾ ಆದೇಶವನ್ನು ರಾಷ್ಟ್ರೀಯ ಭದ್ರತಾ (ಎರಡನೇ ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭಕ್ಕೆ ಮುಂಚಿತವಾಗಿ ಮಾಡಿರಲಿ ಅಥವಾ ತರುವಾಯ ಮಾಡಿರಲಿ, ಅದೇ ವ್ಯಕ್ತಿಯ ವಿರುದ್ಧ 3ನೇ ಪ್ರಕರಣದ ಅಡಿಯಲ್ಲಿ ಇನ್ನೊಂದು ಸ್ಥಾನಬದ್ಧತಾ ಆದೇಶವನ್ನು (ಇಲ್ಲಿ ಇನ್ನು ಮುಂದೆ ಈ ಉಪಪ್ರಕರಣದಲ್ಲಿ ತರುವಾಯದ ಸ್ಥಾನಬದ್ಧತಾ ಆದೇಶವೆಂದು ಉಲ್ಲೇಖಿಸಿದೆ) ಮಾಡುವುದನ್ನು ಪ್ರತಿಷೇಧಿಸತಕ್ಕದ್ದಲ್ಲ:

ಪರಂತು, ಅಂತಹ ವ್ಯಕ್ತಿಯ ವಿರುದ್ಧ ಮಾಡಿದ ಮೊದಲಿನ ಸ್ಥಾನಬದ್ಧತಾ ಆದೇಶವು ಮುಕ್ತಾಯವಾದ ಅಥವಾ ರದ್ದಾದ ತರುವಾಯ ಯಾವುವೇ ಹೊಸ ಸಂಗತಿಗಳು ಉದ್ಭವಿಸದೆ ಇರುವಲ್ಲಿ, ತರುವಾಯದ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡಬಹುದಾದ ಗರಿಷ್ಠ ಅವಧಿಯು ಯಾವುದೇ ಸಂದರ್ಭದಲ್ಲಿ ಮೊದಲಿನ ಸ್ಥಾನಬದ್ಧತಾ ಆದೇಶದ ಅಡಿಯಲ್ಲಿನ ಸ್ಥಾನಬದ್ಧತೆಯ ದಿನಾಂಕದಿಂದ ಹನ್ನೆರಡು ತಿಂಗಳ ಒಂದು ಅವಧಿಯ ಮುಕ್ತಾಯವನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

**14ಎ. ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆದುಕೊಳ್ಳದೆ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗಳಿಗಾಗಿ ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಬಹುದಾದ ಸಂದರ್ಭಗಳು.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಲ್ಲಿ ಅಥವಾ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಅಡಕವಾಗಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿ ಯಾವ ವ್ಯಕ್ತಿಗೆ ಸಂಬಂಧಿಸಿದಂತೆ 1989ರ ಜೂನ್ 8ನೇ ದಿನಾಂಕಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ಯಾವನೇ ವ್ಯಕ್ತಿಯು ಯಾವುದೇ ಗಲಭೆಪೀಡಿತ ಪ್ರದೇಶದಲ್ಲಿ,–

**(i)** ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ನಿಯಂತ್ರಿಸುವ ಸರ್ಕಾರದ ಪ್ರಯತ್ನಗಳನ್ನು ಅಡ್ಡಿಪಡಿಸುವುದರಿಂದ; ಮತ್ತು

**(ii)** (ಎ) ಭಾರತದ ರಕ್ಷಣೆಗೆ; ಅಥವಾ

(ಬಿ) ಭಾರತದ ಭದ್ರತೆಗೆ; ಅಥವಾ

(ಸಿ) ರಾಜ್ಯದ ಭದ್ರತೆಗೆ; ಅಥವಾ

(ಡಿ) ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಗೆ; ಅಥವಾ

(ಇ) ಸಮುದಾಯಕ್ಕೆ ಅತ್ಯವಶ್ಯವಾದ ಸರಬರಾಜುಗಳು ಮತ್ತು ಸೇವೆಗಳ ನಿರ್ವಹಣೆಗೆ

– ಬಾಧಕವಾಗುವಂತೆ ಯಾವುದೇ ರೀತಿಯ ಕೃತ್ಯವನ್ನು ಮಾಡುವುದರಿಂದ ಅವನನ್ನು ತಡೆಗಟ್ಟುವ ದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಲಾಗಿದ್ದರೆ ಮೂರು ತಿಂಗಳಿಗಿಂತ ಹೆಚ್ಚಿನ, ಆದರೆ ಅವನ ಸ್ಥಾನಬದ್ಧತೆಯ ದಿನಾಂಕದಿಂದ ಆರು ತಿಂಗಳನ್ನು ಮೀರದ ಅವಧಿಗಾಗಿ ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆದುಕೊಳ್ಳದೆ ಸ್ಥಾನಬದ್ಧತೆಯಲ್ಲಿಡಬಹುದು.

**ವಿವರಣೆ 1.**– 3ನೇ ಪ್ರಕರಣದ (2)ನೇ ಉಪಪ್ರಕರಣದ ವಿವರಣೆಯ ಉಪಬಂಧಗಳು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಆ ಉಪ-ಪ್ರಕರಣದ ಉದ್ದೇಶಗಳಿಗೆ ಅವು ಅನ್ವಯವಾಗುವಂತೆ ಅನ್ವಯವಾಗತಕ್ಕದ್ದು.

**ವಿವರಣೆ 2.**– ಈ ಉಪಪ್ರಕರಣದಲ್ಲಿ, "ಗಲಭೆಪೀಡಿತ ಪ್ರದೇಶ" ಎಂದರೆ ಪಂಜಾಬ್ ಗಲಭೆಪೀಡಿತ ಪ್ರದೇಶ ಅಧಿನಿಯಮ, 1983ರ (1983ರ 32) 3ನೇ ಪ್ರಕರಣದ ಅಡಿಯಲ್ಲಿ ಅಥವಾ ಚಂಡೀಘಡ ಗಲಭೆಪೀಡಿತ ಪ್ರದೇಶ ಅಧಿನಿಯಮ, 1983ರ (1983ರ 33) 3ನೇ ಪ್ರಕರಣದ ಅಡಿಯಲ್ಲಿ ಯಾವ ಪ್ರದೇಶವನ್ನು ತತ್ಕಾಲದಲ್ಲಿ ಒಂದು ಗಲಭೆಪೀಡಿತ ಪ್ರದೇಶವೆಂದು ಅಧಿಸೂಚನೆಯ ಮೂಲಕ ಘೋಷಿಸಲಾಗಿದೆಯೋ ಆ ಯಾವುದೇ ಪ್ರದೇಶ.

**ವಿವರಣೆ 3.**– ಈ ಉಪ-ಪ್ರಕರಣದಲ್ಲಿ "ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳು" ಎಂದರೆ ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧ) ಅಧ್ಯಾದೇಶ, 1987ರ (1987ರ ಅಧ್ಯಾದೇಶ 2) ಅರ್ಥವ್ಯಾಪ್ತಿಯೊಳಗಿನ "ಭಯೋತ್ಪಾದಕ ಕೃತ್ಯಗಳು ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳು."

(2) ಯಾರಿಗೆ (1)ನೇ ಉಪ-ಪ್ರಕರಣವು ಅನ್ವಯವಾಗುವುದೋ ಆ ಯಾರೇ ವ್ಯಕ್ತಿಯ ಸಂದರ್ಭದಲ್ಲಿ 3, 8 ಮತ್ತು 10 ರಿಂದ 14ನೇ ಪ್ರಕರಣಗಳು ಈ ಮುಂದಿನ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು, ಎಂದರೆ:–

(ಎ) 3ನೇ ಪ್ರಕರಣದಲ್ಲಿ,–

(i) (4)ನೇ ಉಪ-ಪ್ರಕರಣದ ಪರಂತುಕದಲ್ಲಿ,–

(ಎ) "ಹತ್ತು ದಿನಗಳನ್ನು" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಹದಿನೈದು ದಿನಗಳು" ಎಂಬ ಪದಗಳಿಗೆ ಬದಲಾಗಿ "ಇಪ್ಪತ್ತು ದಿನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (5)ನೇ ಉಪ-ಪ್ರಕರಣದಲ್ಲಿ, "ಏಳು ದಿನಗಳೊಳಗೆ" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) 8ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ "ಹತ್ತು ದಿನಗಳನ್ನು" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) 10ನೇ ಪ್ರಕರಣದಲ್ಲಿ "ಮೂರು ವಾರಗಳೊಳಗೆ .......................... ಇಡತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ನಾಲ್ಕು ತಿಂಗಳು ಮತ್ತು ಎರಡು ವಾರಗಳೊಳಗೆ ................. ಇಡತಕ್ಕದ್ದು"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಡಿ) 11ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿ "ಏಳು ವಾರಗಳೊಳಗಾಗಿ" ಎಂಬ ಪದಗಳಿಗೆ ಬದಲಾಗಿ "ಐದು ತಿಂಗಳು ಮತ್ತು ಮೂರು ವಾರಗಳೊಳಗಾಗಿ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ii) (2)ನೇ ಉಪ-ಪ್ರಕರಣದಲ್ಲಿ, "ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಗಾಗಿ" ಎಂಬ ಪದಗಳಿಗೆ ಬದಲಾಗಿ "ಸಂಬಂಧಪಟ್ಟ ವ್ಯಕ್ತಿಯ ಮುಂದುವರಿದ ಸ್ಥಾನಬದ್ಧತೆಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಇ) 12ನೇ ಪ್ರಕರಣದಲ್ಲಿ, "ಸ್ಥಾನಬದ್ಧತೆಗಾಗಿ" ಮತ್ತು "ಸ್ಥಾನಬದ್ಧತೆಯನ್ನು" ಎಂಬ ಪದಗಳು ಬರುವ ಎರಡೂ ಸ್ಥಳಗಳಲ್ಲಿ ಆ ಪದಗಳಿಗೆ ಬದಲಾಗಿ "ಮುಂದುವರಿದ ಸ್ಥಾನಬದ್ಧತೆಗಾಗಿ" ಮತ್ತು "ಮುಂದುವರಿದ ಸ್ಥಾನಬದ್ಧತೆಯನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಎಫ್) 13ನೇ ಪ್ರಕರಣದಲ್ಲಿ, "ಹನ್ನೆರಡು ತಿಂಗಳುಗಳು" ಎಂಬ ಪದಗಳಿಗೆ ಬದಲಾಗಿ "ಎರಡು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಜಿ) 14ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ಪರಂತುಕದಲ್ಲಿ "ಹನ್ನೆರಡು ತಿಂಗಳ" ಎಂಬ ಪದಗಳಿಗೆ ಬದಲಾಗಿ ""ಎರಡು ವರ್ಷಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**15. ಸ್ಥಾನಬದ್ಧತೆಯಲ್ಲಿ ಇಡಲಾದ ವ್ಯಕ್ತಿಗಳ ತಾತ್ಕಾಲಿಕ ಬಿಡುಗಡೆ.-** (1) ಸಮುಚಿತ ಸರ್ಕಾರವು ಯಾವುದೇ ಕಾಲದಲ್ಲಿ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಸ್ಥಾನಬದ್ಧತೆಯಲ್ಲಿಡಲಾದ ಯಾರೇ ವ್ಯಕ್ತಿಯನ್ನು ಷರತ್ತುಗಳಿಲ್ಲದೆ ಅಥವಾ ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದಂಥ ಆ ವ್ಯಕ್ತಿಯು ಅಂಗೀಕರಿಸುವಂಥ ಷರತ್ತುಗಳ ಮೇಲೆ ಯಾವುದೇ ನಿರ್ದಿಷ್ಟ ಅವಧಿಗಾಗಿ ಬಿಡುಗಡೆ ಮಾಡಬಹುದೆಂದು ನಿರ್ದೇಶಿಸಬಹುದು ಮತ್ತು ಯಾವುದೇ ಕಾಲದಲ್ಲಿ ಅವನ ಬಿಡುಗಡೆಯನ್ನು ರದ್ದುಪಡಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಯಾರೇ ವ್ಯಕ್ತಿಯ ಬಿಡುಗಡೆಯನ್ನು ನಿರ್ದೇಶಿಸುವಾಗ ಸಮುಚಿತ ಸರ್ಕಾರವು ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳ ಸೂಕ್ತ ಪಾಲನೆಗಾಗಿ ಜಾಮೀನುದಾರರೊಂದಿಗೆ ಅಥವಾ ಜಾಮೀನುದಾರರಿಲ್ಲದೆ ಒಂದು ಬಂಧಪತ್ರವನ್ನು ಬರೆದುಕೊಡುವಂತೆ ಅವನನ್ನು ಅಗತ್ಯಪಡಿಸಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಬಿಡುಗಡೆಯಾದ ಯಾರೇ ವ್ಯಕ್ತಿಯು ಅವನ ಬಿಡುಗಡೆಯನ್ನು ಅಥವಾ ಸಂದರ್ಭಾನುಸಾರವಾಗಿ ಅವನ ಬಿಡುಗಡೆಯನ್ನು ರದ್ದುಪಡಿಸುವುದನ್ನು ನಿರ್ದೇಶಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾಲ ಮತ್ತು ಸ್ಥಳದಲ್ಲಿ ಮತ್ತು ಆ ಪ್ರಾಧಿಕಾರಕ್ಕೆ ಶರಣಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಸಾಕಷ್ಟು ಕಾರಣಗಳಿಲ್ಲದೆ, (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಶರಣಾಗತನಾಗುವುದಕ್ಕೆ ತಪ್ಪಿದರೆ, ಅವನು ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(5) (1)ನೇ ಉಪಪ್ರಕರಣದ ಅಡಿಯಲ್ಲಿ ಬಿಡುಗಡೆಯಾದ ಯಾರೇ ವ್ಯಕ್ತಿಯು ಸದರಿ ಉಪಪ್ರಕರಣದ ಅಡಿಯಲ್ಲಿ ಅವನಿಗೆ ವಿಧಿಸಿದ ಅಥವಾ ಅವನು ಬರೆದುಕೊಟ್ಟಿರುವ ಬಂಧಪತ್ರದಲ್ಲಿನ ಯಾವುವೇ ಷರತ್ತುಗಳನ್ನು ಪೂರೈಸಲು ತಪ್ಪಿದರೆ ಆ ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೆಂಬುದಾಗಿ ಘೋಷಿಸತಕ್ಕದ್ದು ಮತ್ತು ಅದಕ್ಕೆ ಬದ್ಧನಾಗಿರುವ ಯಾರೇ ವ್ಯಕ್ತಿಯು ಆ ಸಂಬಂಧದ ದಂಡವನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು.

**16. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ವಿರುದ್ಧ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**17. ರಾಜ್ಯ ಕಾನೂನುಗಳ ಅಡಿಯಲ್ಲಿನ ಸ್ಥಾನಬದ್ಧತೆಗಳಿಗೆ ಸಂಬಂಧಿಸಿದಂತೆ ಅಧಿನಿಯಮವು ಪರಿಣಾಮಕಾರಿಯಾಗದಿರುವುದು.–** (1) ಈ ಅಧಿನಿಯಮದಲ್ಲಿ ಇರುವುದು ಯಾವುದೂ 1980ರ ರಾಷ್ಟ್ರೀಯ ಭದ್ರತಾ ಅಧ್ಯಾದೇಶವು (1980ರ 11) ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿ ಇದ್ದಂಥ ಯಾವುದೇ ರಾಜ್ಯ ಕಾನೂನಿನ ಅಡಿಯಲ್ಲಿ ಮಾಡಿದ ಸ್ಥಾನಬದ್ಧತಾ ಆದೇಶಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ ಅಥವಾ ಯಾವುದೇ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ ಮತ್ತು ತದನುಸಾರವಾಗಿ ಯಾರಿಗೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಕಾನೂನಿನ ಅಡಿಯಲ್ಲಿ ಮಾಡಿದ ಯಾವುದೇ ಸ್ಥಾನಬದ್ಧತಾ ಆದೇಶವು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವುದೋ ಆ ಪ್ರತಿಯೊಬ್ಬ ವ್ಯಕ್ತಿಯು ಅಂತಹ ಸ್ಥಾನಬದ್ಧತೆಗೆ ಸಂಬಂಧಿಸಿದಂತೆ ಅಂತಹ ರಾಜ್ಯ ಕಾನೂನಿನ ಉಪಬಂಧಗಳ ಮೂಲಕ ಅಥವಾ ಅಂಥ ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿರುವಂಥ ರಾಜ್ಯ ಕಾನೂನು ಒಂದು ಅಧ್ಯಾದೇಶವಾಗಿರುವಲ್ಲಿ (ಇಲ್ಲಿ ಇನ್ನು ಮುಂದೆ ರಾಜ್ಯ ಅಧ್ಯಾದೇಶವೆಂದು ಉಲ್ಲೇಖಿಸಿದೆ) ಆ ರಾಜ್ಯ ಅಧ್ಯಾದೇಶವನ್ನು,–

(i) ಅಂಥ ಪ್ರಾರಂಭಕ್ಕೆ ಮುಂಚೆ ಆ ರಾಜ್ಯ ವಿಧಾನ ಮಂಡಲವು ಅಂಗೀಕರಿಸಿದ ಒಂದು ಅಧಿನಿಯಮಿತಿಯ ಮೂಲಕ ಪ್ರತಿಸ್ಥಾಪಿಸಿದ್ದರೆ, ಅಂಥ ಅಧಿನಿಯಮಿತಿಯ ಮೂಲಕ; ಅಥವಾ

(ii) ಅಂಥ ಪ್ರಾರಂಭದ ತರುವಾಯ ಆ ರಾಜ್ಯದ ವಿಧಾನ ಮಂಡಲವು ಅಂಗೀಕರಿಸಿದಂಥ ಒಂದು ಅಧಿನಿಯಮಿತಿಯ ಮೂಲಕ ಮತ್ತು ಯಾವುದರ ಅನ್ವಯವು ಆ ರಾಜ್ಯ ಅಧ್ಯಾದೇಶದ ಅಡಿಯಲ್ಲಿ ಅಂಥ ಪ್ರಾರಂಭಕ್ಕೆ ಮುಂಚೆ ಮಾಡಿದ ಸ್ಥಾನಬದ್ಧತಾ ಆದೇಶಗಳಿಗೆ ಸೀಮಿತವಾಗಿರುವುದೋ ಆ ಅಧಿನಿಯಮಿತಿಯ ಮೂಲಕ ಪ್ರತಿಸ್ಥಾಪಿಸಿದ್ದರೆ ಅಂಥ ಅಧಿನಿಯಮಿತಿಯ ಮೂಲಕ

– ಈ ಅಧಿನಿಯಮವು ಅಧಿನಿಯಮಿತಿಯಾಗಿಲ್ಲದಿದ್ದರೆ ಹೇಗೋ ಹಾಗೆ ಅಂಥ ಅಧಿನಿಯಮಿತಿಯ ಮೂಲಕ ನಿಯಂತ್ರಿತವಾಗತಕ್ಕದ್ದು.

(2) ಈ ಪ್ರಕರಣದಲ್ಲಿ ಇರುವುದು ಯಾವುದೂ, ರಾಷ್ಟ್ರೀಯ ಭದ್ರತಾ ಅಧ್ಯಾದೇಶ, 1980ರ (1980ರ 11) ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಹಿಂದೆ ಹೇಳಿದಂತೆ ಅವನಿಗೆ ಸಂಬಂಧಿಸಿದ ಹಾಗೆ ಜಾರಿಯಲ್ಲಿದ್ದ ಸ್ಥಾನಬದ್ಧತಾ ಆದೇಶವು ಯಾವುದೇ ಕಾರಣಕ್ಕಾಗಿ ಪರಿಣಾಮಕಾರಿಯಾಗಿರುವುದು ನಿಂತುಹೋದ ತರುವಾಯ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯ ವಿರುದ್ಧ 3ನೇ ಪ್ರಕರಣದ ಅಡಿಯಲ್ಲಿ ಒಂದು ಸ್ಥಾನಬದ್ಧತಾ ಆದೇಶವನ್ನು ಮಾಡುವುದನ್ನು ಪ್ರತಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ "ರಾಜ್ಯ ಕಾನೂನು" ಎಂದರೆ 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಸ್ಥಾನಬದ್ಧತಾ ಆದೇಶವನ್ನು ಮಾಡಬಹುದಾದಂಥ ಎಲ್ಲ ಕಾರಣಗಳ ಅಥವಾ ಯಾವುದೇ ಕಾರಣದ ಮೇಲೆ ಪ್ರತಿಬಂಧಕ ಸ್ಥಾನಬದ್ಧತೆಗಾಗಿ ಉಪಬಂಧಿಸುವ ಮತ್ತು ಸದರಿ ಅಧ್ಯಾದೇಶದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನು.

**18. ನಿರಸನಗಳು ಮತ್ತು ಉಳಿಸುವಿಕೆಗಳು.–** (1) ರಾಷ್ಟ್ರೀಯ ಭದ್ರತಾ ಅಧ್ಯಾದೇಶ, 1980ನ್ನು (1980ರ 11) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸಹ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಈ ಅಧಿನಿಯಮವನ್ನು 1980ರ ಸೆಪ್ಟೆಂಬರ್ 23ನೇ ದಿನಾಂಕದಂದು ಜಾರಿಗೆ ಬಂದಿದ್ದರೆ ಹೇಗೋ ಹಾಗೆ ಮಾಡಲಾಗಿದೆ ಅಥವಾ ಕ್ರಮ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ವಿಶೇಷವಾಗಿ ಸದರಿ ಅಧ್ಯಾದೇಶದ 10ನೇ ಪ್ರಕರಣದ ಅಡಿಯಲ್ಲಿ ಮಾಡಿದ ಮತ್ತು ಈ ಅಧಿನಿಯಮವು ರಾಷ್ಟ್ರಪತಿಯ ಅನುಮತಿಯನ್ನು ಪಡೆದ ದಿನಾಂಕಕ್ಕೆ

ನಿಕಟಪೂರ್ವದಲ್ಲಿ ಯಾವುದೇ ಸಲಹಾ ಮಂಡಲಿಯ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಭಿಪ್ರಾಯ ಕೋರಿಕೆಯ ಬಗ್ಗೆ, ಈ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಅಂಥ ಮಂಡಲಿಯನ್ನು ರಚಿಸಿದ್ದರೆ ಹೇಗೋ ಹಾಗೆ ಆ ದಿನಾಂಕದ ತರುವಾಯ ಆ ಮಂಡಲಿಯು ವ್ಯವಹರಿಸುವುದನ್ನು ಮುಂದುವರೆಸಬಹುದು.

## ಅನುಬಂಧ

## ರಾಷ್ಟ್ರೀಯ ಭದ್ರತಾ (ತಿದ್ದುಪಡಿ) ಅಧಿನಿಯಮ, 1984

## (1984ರ ಅಧಿನಿಯಮ ಸಂಖ್ಯೆ 24)

[18ನೇ ಮೇ 1984]

ಪಂಜಾಬ್ ರಾಜ್ಯ ಮತ್ತು ಚಂಡಿಘಡ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ರಾಷ್ಟ್ರೀಯ ಭದ್ರತಾ ಅಧಿನಿಯಮ, 1980ನ್ನು ಅನ್ವಯಿಸುವಲ್ಲಿ ಅದನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಭದ್ರತಾ (ತಿದ್ದುಪಡಿ) ಅಧಿನಿಯಮ, 1984 ಎಂದು ಕರೆಯತಕ್ಕದ್ದು.

(2) ಇದು 1984ರ ಏಪ್ರಿಲ್ 5ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪಂಜಾಬ್ ಮತ್ತು ಚಂಡೀಘಡಕ್ಕೆ 1980ರ 65ನೇ ಅಧಿನಿಯಮವನ್ನು ಅನ್ವಯಿಸುವಲ್ಲಿ ಅದರ ತಿದ್ದುಪಡಿ.–** ರಾಷ್ಟ್ರೀಯ ಭದ್ರತಾ ಅಧಿನಿಯಮ, 1980 (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) ಇದು, ಪಂಜಾಬ್ ರಾಜ್ಯ ಮತ್ತು ಚಂಡಿಘಡ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯಿಸುವಲ್ಲಿ 3 ರಿಂದ 5ರ ವರೆಗಿನ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉಪಬಂಧಗಳಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.

**3. 3ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 3ನೇ ಪ್ರಕರಣದ (4)ನೇ ಉಪಪ್ರಕರಣದ ಪರಂತುಕದಲ್ಲಿ,–

(ಎ) "ಹತ್ತು ದಿನಗಳನ್ನು" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) "ಹದಿನೈದು ದಿನಗಳು" ಎಂಬ ಪದಗಳ ಬದಲಾಗಿ "ಇಪ್ಪತ್ತು ದಿನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 8ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 8ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಹತ್ತು ದಿನಗಳನ್ನು" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿನಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 14ಎ ಹೊಸ ಪ್ರಕರಣವನ್ನು ಸೇರಿಸುವುದು.–** ಮೂಲ ಅಧಿನಿಯಮದಲ್ಲಿ 14ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"14ಎ. ಸಲಹಾ ಮಂಡಲಿಗಳ ಅಭಿಪ್ರಾಯವನ್ನು ಪಡೆದುಕೊಳ್ಳದೆ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗಳಿಗಾಗಿ ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಬಹುದಾದ ಸಂದರ್ಭಗಳು.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿ ಯಾವ ವ್ಯಕ್ತಿಗೆ ಸಂಬಂಧಿಸಿದಂತೆ 1986ರ ಏಪ್ರಿಲ್ 3ನೇ ದಿನಾಂಕಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು,–

(ಎ) ಭಾರತದ ರಕ್ಷಣೆಗೆ; ಅಥವಾ

(ಬಿ) ಭಾರತದ ಭದ್ರತೆಗೆ; ಅಥವಾ

(ಸಿ) ರಾಜ್ಯದ ಭದ್ರತೆಗೆ; ಅಥವಾ

(ಡಿ) ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಗೆ; ಅಥವಾ

(ಇ) ಸಮುದಾಯಕ್ಕೆ ಅತ್ಯವಶ್ಯವಾದ ಸರಬರಾಜುಗಳು ಮತ್ತು ಸೇವೆಗಳ ನಿರ್ವಹಣೆಗೆ – ಬಾಧಕವಾಗುವಂತೆ ಯಾವುದೇ ಗಲಭೆ ಪೀಡಿತ ಪ್ರದೇಶದಲ್ಲಿ ಯಾವುದೇ ರೀತಿಯಲ್ಲಿ ಅವನು ಕಾರ್ಯನಿರ್ವಹಿಸುವುದನ್ನು ತಡೆಗಟ್ಟುವ ದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಲಾಗಿದ್ದರೆ ಅವನ ಸ್ಥಾನಬದ್ಧತೆಯ ದಿನಾಂಕದಿಂದ ಮೂರು ತಿಂಗಳಿಗಿಂತ ಹೆಚ್ಚಿನ ಆದರೆ ಆರು ತಿಂಗಳನ್ನು ಮೀರದ ಅವಧಿಗಾಗಿ ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆದುಕೊಳ್ಳದೆ ಸ್ಥಾನಬದ್ಧತೆಯಲ್ಲಿಡಬಹುದು.

**ವಿವರಣೆ 1.–** 3ನೇ ಪ್ರಕರಣದ (2)ನೇ ಉಪಪ್ರಕರಣದ ವಿವರಣೆಯ ಉಪಬಂಧಗಳು ಆ ಉಪಪ್ರಕರಣದ ಉದ್ದೇಶಗಳಿಗೆ ಅವು ಅನ್ವಯವಾಗುವ ಹಾಗೆ ಈ ಉಪಪ್ರಕರಣದ ಉದ್ದೇಶಗಳಿಗೆ ಅನ್ವಯವಾಗತಕ್ಕದ್ದು.

**ವಿವರಣೆ 2.–** ಈ ಉಪಪ್ರಕರಣದಲ್ಲಿ, "ಗಲಭೆಪೀಡಿತ ಪ್ರದೇಶ" ಎಂದರೆ ಪಂಜಾಬ್ ಗಲಭೆಪೀಡಿತ ಪ್ರದೇಶಗಳ ಅಧಿನಿಯಮ, 1983ರ 3ನೇ ಪ್ರಕರಣದ ಅಡಿಯಲ್ಲಿನ ಅಥವಾ ಚಂಡೀಘಡ ಗಲಭೆ ಪೀಡಿತ ಪ್ರದೇಶಗಳ ಅಧಿನಿಯಮ, 1983ರ 3ನೇ ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯ ಮೂಲಕ ತತ್ಕಾಲದಲ್ಲಿ ಒಂದು ಗಲಭೆಪೀಡಿತ ಪ್ರದೇಶವೆಂದು ಘೋಷಿಸಲಾಗಿರುವಂಥ ಯಾವುದೇ ಪ್ರದೇಶ.

(2) (1)ನೇ ಉಪ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯ ಸಂದರ್ಭದಲ್ಲಿ 10 ರಿಂದ 14ರ ವರೆಗಿನ ಪ್ರಕರಣಗಳು ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು, ಎಂದರೆ:–

(ಎ) 10ನೇ ಪ್ರಕರಣದಲ್ಲಿ "ಮೂರು ವಾರದೊಳಗೆ ಇಡತಕ್ಕದ್ದು" ಎಂಬ ಪದಗಳ ಬದಲಾಗಿ "ನಾಲ್ಕು ತಿಂಗಳು ಮತ್ತು ಎರಡು ವಾರಗಳೊಳಗೆ ಇಡತಕ್ಕದ್ದು " ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) 11ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ಏಳು ವಾರಗಳೊಳಗಾಗಿ" ಎಂಬ ಪದಗಳ ಬದಲಾಗಿ "ಐದು ತಿಂಗಳು ಮತ್ತು ಮೂರು ವಾರಗಳೊಳಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಸಂಬಂಧಿಸಿದ ವ್ಯಕ್ತಿಯ ಸ್ಥಾನಬದ್ಧತೆಗಾಗಿ" ಎಂಬ ಪದಗಳಿಗೆ ಬದಲಾಗಿ "ಸಂಬಂಧಿಸಿದ ವ್ಯಕ್ತಿಯ ಮುಂದುವರಿದ ಸ್ಥಾನಬದ್ಧತೆಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) 12ನೇ ಪ್ರಕರಣದಲ್ಲಿ "ಸ್ಥಾನಬದ್ಧತೆಗಾಗಿ" ಮತ್ತು "ಸ್ಥಾನಬದ್ಧತೆಯನ್ನು" ಎಂಬ ಪದಗಳು ಬರುವ ಎರಡು ಸ್ಥಳಗಳಲ್ಲಿ, ಆ ಪದಗಳಿಗೆ ಬದಲಾಗಿ "ಮುಂದುವರಿದ ಸ್ಥಾನಬದ್ಧತೆಗಾಗಿ" ಮತ್ತು "ಮುಂದುವರಿದ ಸ್ಥಾನಬದ್ಧತೆಯನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) 13ನೇ ಪ್ರಕರಣದಲ್ಲಿ "ಹನ್ನೆರಡು ತಿಂಗಳುಗಳು" ಎಂಬ ಪದಗಳಿಗೆ ಬದಲಾಗಿ "ಎರಡು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಇ) 14ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ಪರಂತುಕದಲ್ಲಿ "ಹನ್ನೆರಡು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಎರಡು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. ನಿರಸನ ಮತ್ತು ಉಳಿಸುವಿಕೆ.–** (1) ರಾಷ್ಟ್ರೀಯ ಭದ್ರತಾ (ತಿದ್ದುಪಡಿ) ಅಧ್ಯಾದೇಶ, 1984 ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸಹ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

* * *